**PW–4 CROSS**

**ದೀ 14.02.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**– ಪಾಟೀ ಸವಾಲು – ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

2. ಚಾಸಾ 01 ನನ್ನ ಅತ್ತೆ . ಘಟನೆ ನಡೆಯಿತು ಎನ್ನಲಾದಾಗ ಇದ್ದರು ಎನ್ನಲಾದ 30–40 ಜನರ ಹೆಸರು ನನಗೆ ಮರೆತು ಹೋಗಿದೆ . ಪೋಲೀಸರಿಗೆ ನಾನು ಹೇಳಿಕೆ ನೀಡಿಲ್ಲ . ಯಾರು ಯಾರು ಹೊಡೆಯಲು ಬಂದರು ಎಂದು ನಾನು ಹೇಳಬಲ್ಲೆ . ಘಟನೆ ನಡೆದಾಗ ನಾನು ಸ್ಥಳದಲ್ಲಿಯೇ ಇದ್ದೆ . ಚಾಸಾ1 ರವರಿಗೆ ಬೆನ್ನಿಗೆ ಮೈ ಕೈಗೆ ಹೊಡೆತ ಬಿದಿದ್ದು ರಕ್ತಗಾಯಗಳಾಗಿದ್ದವು . ಚಾಸಾ1 ರವರಿಗೆ ಯಾರು ಹೊಡೆದರು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ . ಚಿತ್ತಪ್ಪ ಕೊಡಲಿಯಿಂದ ಚಾಸಾ10 ರವರ ತಲೆಗೆ ಹೊಡೆದರು . ಅವರ ತಲೆಗೆ ರಕ್ತಗಾಯವಾಗಿ ತಲೆ ಬಿಚ್ಚಿಕೊಂಡಿತು . ಚಾಸಾ 11 ರವರಿಗೆ ಕೋಲಿನಿಂದ ಮೈ ಕೈಗೆಲ್ಲಾ ಪಾತಪ್ಪ ಹೊಡೆದರು . ಚಾಸಾ 7 ರವರಿಗೆ ಯಾರು ಹೊಡೆದರು ಎಂದು ನಾನು ನೋಡಲಿಲ್ಲ . ಚಾಸಾ12 ತಳ್ಳಾಟದಲ್ಲಿ ಕೆಳಗೆ ಬಿದ್ದಳು . ಅವಳನ್ನು ಯಾರು ತಳ್ಳಿದರು ಎಂದು ನನಗೆ ಹೇಳಲಾಗುವುದಿಲ್ಲ .

3. ವೆಂಕಟೇಶ , ಶ್ರೀನಿವಾಸ ಮೋಟರ್ ಗೆ ಕೊಡಲಿಯಿಂದ ಹೊಡೆದರು . ಚಿತ್ತಪ್ಪ , ಕೆಂಚಪ್ಪ , ಶ್ರೀನಿವಾಸ , ಪಾತಪ್ಪ ವಡ್ಡ ಸೂಳೇ ಮಕ್ಕಳಾ ಎಂದು ಬೈದರು . ಕಸವನಹಳ್ಳಿಯಿಂದ ನಮ್ಮ ಅತ್ತೆ , ಮಾವನನ್ನು ಅಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕಳುಹಿಸಿ ನಾವು ಸರ್ಕಾರಿ ವಾಹನದಲ್ಲಿ ಹೋದೇವು . ಮನೆಯ ಹತ್ತಿರ ಬಂದು ಬಾಗಿಲು ಶೀಟು ಹೊಡೆದು ಹಾಕಿ ಹಣ ತೆಗೆದುಕೊಂಡು ಹೊರಟು ಹೋದರು ಎಂದು ನನಗೆ ಪಾರ್ವತಮ್ಮ ಮತ್ತು ಪವಿತ್ರ ಹೇಳಿದರು . ಅವರಿಬ್ಬರು ಕಣಿವೆ ಜೋಗಿಹಳ್ಳಿಯವರು . ಜಮೀನಿನ ವಿಚಾರದಲ್ಲಿ ಮೊದಲಿನಿಂದ ಗಲಾಟೆ ಇರುವುದರಿಂದ ಆರೋಪಿಗಳಿಗೂ ನಮಗೂ ವಿಶ್ವಾಸವಿಲ್ಲ ಎಂದರೆ ಸರಿ .

4. ಅದೇ ದಿನ ಚಾಸಾ–7 , 10 ಆರೋಪಿ ಚಿತ್ತಪ್ಪನಿಗೆ ಹೊಡೆದರು ಎಂದು ದೂರು ದಾಖಲಾಗಿತ್ತು ಎಂದರೆ ಸರಿ . ನಾನು ಬಿ.ಎಡ್. ಓದಿದ್ದೇನೆ . ಸುಮಾರು ಅರ್ಧ ಗಂಟೆ ಗಲಾಟೆಯಾಯಿತು . ರೆಡ್‌ಮಿ ಮೊಬೈಲ್ ನಿಂದ ನಾನು ವಿಡಿಯೋ ಮಾಡಿದೆ . ಅದು android software ಎಂದರೆ ಸರಿ . ಅದರಲ್ಲಿ ವಿಡಿಯೋ ಮಾಡಿದ ದಿನಾಂಕ , ಸಮಯ ಬರುತ್ತದೆ ಎಂದರೆ ಸರಿ . ಅದನ್ನು ಸೈಬರ್ ಸೆಂಟರ್ ನಲ್ಲಿ ಪೆನ್ ಡ್ರೈವ್ ಗೆ ಕಾಪಿ ಮಾಡಿಸಿದೇವು . ಪೆನ್ ಡ್ರೈವ್ ಗೆ ಕಾಪಿ ಮಾಡಿಸಿದ ಬಗ್ಗೆ ಬಿಲ್ ಇರುವುದಿಲ್ಲ . ಚಾಸಾ5 , 6 ನನ್ನ ಅಣ್ಣಂದಿರು . ಅವರನ್ನು ಪೋಲೀಸರು ಕರೆಯಿಸಿದ್ದರು . ಪೋಲೀಸರು ನನ್ನ ಮೊಬೈಲ್ ನ್ನು ತೆಗೆದುಕೊಂಡಿಲ್ಲ . ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದು , ಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯಹತ್ತಿರ ಬಂದು ಶೀಟ್ ಹೊಡೆದು ಹಾಕಿ ಜಖಂ ಗೊಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಧ ಗಂಟೆ ಗಲಾಟೆ ನಡೆದಿದ್ದು ನನ್ನ ಮೊಬೈಲ್ ನಿಂದ ವಿಡಿಯೋ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಡಿ.ವೈ.ಎಸ್.ಪಿ. ಕಚೇರಿಯಲ್ಲಿ ಹಾಜರುಪಡಿಸಿದ್ದು ಪಂಚನಾಮೆ ಮುಖಾಂತರ ವಶಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದು ಹೆಚ್ ಪಿ ಪೆನ್ ಡ್ರೈವ್ ಆಗಿದ್ದು 8 ಜಿ ಬಿ ಸಾಮರ್ಥದ್ದಾಗಿತ್ತು ಅದನ್ನು ಖರೀದಿ ಮಾಡಿದ ಬಗ್ಗೆ ಬಿಲ್ ಇಲ್ಲ . ಎಷ್ಟು ನಿಮಿಷದ ದೃಶ್ಯಾವಳಿ ಇದೆ ಎಂದು ಹೇಳಲಾಗುವುದಿಲ್ಲ . ಜಮೀನಿನ ವಿಚಾರದಲ್ಲಿ ನಮಗೂ ಮತ್ತು ಆರೋಪಿಗಳಿಗೂ ವೈಶ್ಯಮ್ಯ ಇತ್ತು ಎಂದರೆ ಸರಿ . ಆ ಕಾರಣದಿಂದ ಚಾಸಾ1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಡಿಕೆ ಗಿಡಗಳನ್ನು ಕಿತ್ತು ನಾಶಪಡಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.